**ಸಿ.ಸಿ.ನಂಃ 1265/2025**

**ಪಿ ಡಬ್ಲ್ಯೂಃ 01**

**(ಇಂದು ದಿನಾಂಕಃ 06.10.2025 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)**

**ಮುಂದುವರಿದ ಮುಖ್ಯ ವಿಚಾರಣೆಃ ಶ್ರೀ ಡಿ ಎಂ ಬಿ ವಕೀಲರಿಂದಃ**

6. ಸಾಲದ ಅರ್ಜಿ ನಿಪಿ-6 ,

7. ದಿನಾಂಕ 25-03-2023 ರ ಆಡಳಿತ ಮಂಡಳಿ ಮಾಸಿಕ ಸಭೆಯ ಠರಾವು ನಿಪಿ-7,

8.ದಿನಾಂಕ 27-04-2024 ರ ಅಧಿಕಾರ ಪತ್ರ ನಿಪಿ-8,

9. ದಿನಾಂಕ 16-08-2025 ರ ಅಧಿಕಾರ ಪತ್ರ ನಿಪಿ-9 ಎಂದು ಗುರುತಿಸಲಾಯಿತು.)

**ಪಾಟೀ ಸವಾಲುಃ- ಆರೋಪಿ ಪರ ವಕೀಲರಾದ ಶ್ರೀ ಆರ್ ಎಸ್ ಪಿ ರವರಿಂದಃ-**

ನಿಮ್ಮ ಸಂಘದ ಕೇಂದ್ರ ಕಚೇರಿ ಎಲ್ಲಿದೆ ಸಾಕ್ಷಿ ಕಾರವಾರದಲ್ಲಿದೆ ಅಂತಾ ಉತ್ತರಿಸುತ್ತಾರೆ. ಯಲ್ಲಾಪುರ ತಾಲ್ಲೂಕಿನ ಕಿರವತ್ತಿಯಲ್ಲಿರುವುದು ಅದರ ಒಂದು ಶಾಖೆ ಎಂದರೆ ಸರಿ. ಕಿರವತ್ತಿ ಹೊರತುಪಡಿಸಿ ಯಲ್ಲಾಪುರ ತಾಲ್ಲೂಕಿನಲ್ಲಿ ನಿಮ್ಮ ಸಂಘದ ಯಾವುದಾದರೂ ಶಾಖೆ ಇದೆಯಾ ಎಂದರೆ ಸಾಕ್ಷಿ ಮೈನಳ್ಳಿ ಎಂಬಲ್ಲಿ ಒಂದು ಶಾಖೆ ಇದೆ ಅಂತಾ ಉತ್ತರಿಸುತ್ತಾರೆ. ನಿಮ್ಮ ಸಂಘದ ಯಲ್ಲಾಪುರ ತಾಲ್ಲೂಕಿನಲ್ಲಿರುವ ಎರಡೂ ಶಾಖೆಗಳಿಗೆ ಸಂಬಂಧಿಸಿದಂತೆ ಹಣಕಾಸಿನ ವ್ಯವಹಾರಕ್ಕಾಗಿ ರಾಷ್ಟ್ರೀಕೃತ ಬ್ಯಾಂಕಿನಲ್ಲಿ ಸಂಘದ ಖಾತೆ ಇದೆಯಾ ಎಂದರೆ ಸಾಕ್ಷಿ ಇಲ್ಲ ಅಂತಾ ಉತ್ತರಿಸುತ್ತಾರೆ.

2. ನಿಮ್ಮ ಸಂಘದ ನಿಯಮಾವಳಿಗಳ ಪ್ರಕಾರ ಸಾಲಕ್ಕೆ ಎಷ್ಟು ಬಡ್ಡಿ ವಿಧಿಸಲು ಅವಕಾಶ ಇದೆ ಎಂದರೆ ಸಾಕ್ಷಿ ಶೇಕಡಾ 16 ರ ಬಡ್ಡಿ ವಿಧಿಸಲು ಅವಕಾಶ ಇದೆ ಅಂತಾ ಉತ್ತರಿಸುತ್ತಾರೆ. ಸಾಲಕ್ಕೆ ಚಕ್ರ ಬಡ್ಡಿ ವಿಧಿಸಲು ನಿಮಗೆ ಅವಕಾಶ ಇದೆಯೇ ಎಂದರೆ ಸಾಕ್ಷಿ ಇಲ್ಲ ಅಂತಾ ಉತ್ತರಿಸುತ್ತಾರೆ. ಆರೋಪಿಗೆ ನೀಡಲಾಗಿದೆ ಎನ್ನಲಾದ ಸಾಲಕ್ಕೆ ಬಡ್ಡಿ ಬಿಟ್ಟು ಬೇರೆ ಚಕ್ರ ಬಡ್ಡಿಯನ್ನು ವಿಧಿಸಿದ್ದೀರಾ ಎಂದರೆ ಸಾಕ್ಷಿ ನೋಟಿಸು ಚಾರ್ಜು ವಿದಿಸಿರುವುದು ಬಿಟ್ಟರೆ ಚಕ್ರ ಬಡ್ಡಿ ವಿಧಿಸಿಲ್ಲ ಅಂತಾ ಉತ್ತರಿಸುತ್ತಾರೆ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಎಷ್ಟು ರೂಗಳನ್ನು ನೋಟಿಸು ಚಾರ್ಜು ಎಂಬುದಾಗಿ ವಿಧಿಸಿದ್ದೀರಿ ಎಂದರೆ ಸಾಕ್ಷಿ ರೂ. 450/- ಅಂತಾ ಉತ್ತರಿಸುತ್ತಾರೆ.

3. ನಿಮ್ಮ ಸಂಘದಲ್ಲಿ ಯಾವೆಲ್ಲಾ ರೀತಿಯ ಸಾಲಗಳನ್ನು ನೀಡುತ್ತೀರಿ ಎಂದರೆ ಸಾಕ್ಷಿ ವೈಯಕ್ತಿಕ ಸಾಲ , ವ್ಯವಹಾರ ಸಾಲ, ಎಂ.ಸಿ.ಸಿ.ಎಲ್ ಸಾಲ , ವಾಹನ ಸಾಲಗಳನ್ನು ನೀಡುತ್ತೇವೆ ಅಂತಾ ಉತ್ತರಿಸುತ್ತಾರೆ. ಎಷ್ಟು ಹಣದಿಂದ ಎಷ್ಟು

**ಸಿ.ಸಿ.ನಂಃ 1265/2025**

**ಪಿ ಡಬ್ಲ್ಯೂಃ 01**

ಹಣದವರೆಗೆ ವೈಯಕ್ತಿಕ ಸಾಲ ಕೊಡುತ್ತೀರಿ ಎಂದರೆ ಸಾಕ್ಷಿ ರೂ .50,000/– ರಿಂದ ರೂ .1,50,000/– ವರೆಗೆ ಕೊಡುತ್ತೇವೆ ಅಂತಾ ಉತ್ತರಿಸುತ್ತಾರೆ. ವ್ಯವಹಾರ ಸಾಲ ಎಷ್ಟು ರೂಗಳಿಂದ ಎಷ್ಟು ರುಾಗಳವರೆಗೆ ಕೊಡುತ್ತೀರಿ ಎಂದರೆ ಸಾಕ್ಷಿ ರೂ . 50,000/– ದಿಂದ 3,00,000/– ವರೆಗೆ ಕೊಡುತ್ತೇವೆ ಅಂತಾ ಉತ್ತರಿಸುತ್ತಾರೆ. ಎಂ.ಸಿ.ಸಿ.ಎಲ್ ಸಾಲ ಎಂದರೆ ಸಾಕ್ಷಿ ಮಿಸ್ಟಿ ಕ್ರೆಡಿಟ್ ಕ್ಯಾಶ್ ಲೋನ್. ಸದ್ರಿ ಸಾಲ ಎಷ್ಟು ರೂಗಳಿಂದ ಎಷ್ಟು ರೂಗಳವರೆಗೆ ಕೊಡುತ್ತೀರಿ ಎಂದರೆ ಸಾಕ್ಷಿ ರೂ . 50,000/– ದಿಂದ 3,00,000/– ವರೆಗೆ ಕೊಡುತ್ತೇವೆ ಅಂತಾ ಉತ್ತರಿಸುತ್ತಾರೆ. ರೂ. 3,00,000/– ಕ್ಕೂ ಮಿಕ್ಕಿದ ಸಾಲವನ್ನು ನಿಮ್ಮ ಸಂಘದಲ್ಲಿ ಕೊಡುವುದಿಲ್ಲವೋ ಎಂದರೆ ಸಾಕ್ಷಿ ಕೊಡುತ್ತೇವೆ ಅಂತಾ ಉತ್ತರಿಸುತ್ತಾರೆ.

4. ನಿಮ್ಮ ಸಂಘದಲ್ಲಿ ಸಾಲ ಕೊಡಬೇಕಾದರೆ ಯಾವೆಲ್ಲಾ ಭದ್ರತೆಗಳನ್ನು ಸಾಮಾನ್ಯವಾಗಿ ತೆಗೆದುಕೊಳ್ಳುತ್ತೀರಿ ಎಂದರೆ ಸಾಕ್ಷಿ ಪಾನ್ ಕಾರ್ಡ್ , ಆಧಾರ ಕಾರ್ಡ್ ಹಾಗೂ ದಾಖಲೆಗಳನ್ನು ತೆಗೆದುಕೊಳ್ಳುತ್ತೇವೆ ಅಂತಾ ಉತ್ತರಿಸುತ್ತಾರೆ. ಯಾವೆಲ್ಲಾ ದಾಖಲೆಗಳು ಎಂದರೆ ಸಾಕ್ಷಿ ಉತ್ತರಿಸದೇ ಸುಮ್ಮನಾಗುತ್ತಾರೆ. ಹಾಗಾದರೆ ನಿಮ್ಮ ಸಂಘದಲ್ಲಿ ಪಾನ್ ಕಾರ್ಡ್ ಹಾಗೂ ಆಧಾರ ಕಾರ್ಡ ಆಧಾರದ ಮೇಲೆ ಮಾತ್ರ ಸಾಲವನ್ನು ಮಂಜೂರು ಮಾಡುತ್ತೀರಾ ಎಂದರೆ ಸಾಕ್ಷಿ ಇಲ್ಲ ಅಂತಾ ಉತ್ತರಿಸುತ್ತಾರೆ. ನೀವು ಮೇಲೆ ಹೇಳಿದ ಮೂರೂ ರೀತಿಯ ಸಾಲಕ್ಕೆ ಪಾನ್ ಕಾರ್ಡ , ಆಧಾರ ಕಾರ್ಡ ಆಧಾರದ ಮೇಲೆ ಸಾಲ ಮಂಜೂರು ಮಾಡುತ್ತೀರಲ್ಲವೇ ಎಂದರೆ ಸಾಕ್ಷಿ ಬೇರೆ ಬೇರೆ ಸಾಲಗಳಿಗೆ ಬೇರೆ ಬೇರೆ ದಾಖಲೆಗಳನ್ನು ಪಡೆಯುತ್ತೇವೆ ಅಂತಾ ಉತ್ತರಿಸುತ್ತಾರೆ.

5. ಆರೋಪಿ ನಿಮ್ಮ ಸಂಘಕ್ಕೆ ಸಾಲ ಕೇಳಿ ಪ್ರಥಮ ಬಾರಿಗೆ ಯಾವಾಗ ಬಂದರು ಎಂದರೆ ಸಾಕ್ಷಿ ಉತ್ತರಿಸದೇ ಸುಮ್ಮನಾಗುತ್ತಾರೆ .

**ಈ ಹಂತದಲ್ಲಿ ಆರೋಪಿ ಪರ ವಕೀಲರು ಕಾಲಾವಕಾಶ ಕೋರಿದ್ದರಿಂದ ಕಾಲಾವಕಾಶ ನೀಡಿ ಮುಂದೂಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)**

**ಓ ಹೇ ಕೇ ಸರಿ ಇದೆ**

**ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು**
**ಮತ್ತು ಪ್ರ.ದ.ನ್ಯಾದಂ., ಕಾರವಾರ**